ಸಿ.ಸಿ. ನಂಬರಃ 682/2021

ಪಿ.ಡಬ್ಲ್ಯೂಃ 2

ದಿಃ 25-07-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ</u> 1ನೇ ಆರೋಪಿ ಪರ ವಕೀಲರಾದ ಶ್ರೀ ವಿ.ಎಸ್.ಎನ್ ಇವರಿಂದಃ

ಹೊಸಗೇರಿಯಿಂದ ಶೆಟಗೇರಿ ಕ್ರಾಸ್ ಎಷ್ಟು ದೂರವಾಗುತ್ತದೆ ಎಂದರೆ ಸಾಕ್ಷಿಯು 25 ಮೀಟರ್ ಆಗುತ್ತದೆ ಎಂದು ನುಡಿಯುತ್ತಾರೆ. ಚಾಸಾ-1 ನಿಮ್ಮ ಸಂಬಂಧಿಕರು ಎಂದರೆ ಸಾಕ್ಷಿಯು ಒಂದೇ ಸಮಾಜದವರು ಎಂದು ನುಡಿಯುತ್ತಾರೆ. ನೀವು ಅವರ ಮನೆಗೆ ಹೋಗಿ ಬಂದು ಮಾಡುತ್ತೀರಿ ಎಂದರೆ ಸರಿ. ಯಾವ ವಸ್ತು ಕಳ್ಳತನವಾಗಿರುತ್ತದೆ ಎಂದು ನಿಮಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಪೊಲೀಸರು ಎಷ್ಟು ಸಲ ಬಂದಿರುತ್ತಾರೆ ಎಂದರೆ ಸಾಕ್ಷಿಯು 2 ಸಲ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಪೊಲೀಸರು ಘಟನಾಸ್ಥಳಕ್ಕೆ ಬಂದು ಎಲ್ಲ ನೋಡಿ ಎಲ್ಲ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಎಷ್ಟು ಗಂಟೆಯಿಂದ ಪಂಚನಾಮೆಯನ್ನು ಬರೆದಿರುತ್ತಾರೆ ಎಂದರೆ ಸಾಕ್ಷಿಯು ರಾತ್ರಿ 10 ರಿಂದ 11 ಗಂಟೆಯವರೆಗೆ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಪಂಚನಾಮೆಯನ್ನು ಎಲ್ಲಿ ಬರೆದಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಹಿ ಹಾಕಲು ಹೇಳಿದ ಮೇರೆಗೆ ಸಹಿಯನ್ನು ಹಾಕಿರುತ್ತೀರಿ ಎಂದರೆ ಸರಿ. ಪೊಲೀಸರಿಗೆ ಇದೇ ರೀತಿ ಬರೆಯಿರಿ ಎಂದು ಹೇಳಿರುತ್ತೀರಾ ಎಂದರೆ ಇಲ್ಲ ಎಂದು

ನುಡಿಯುತ್ತಾರೆ. ನಿಮ್ಮ ಪ್ರಕಾರ ಆ ದಿನ ಎಷ್ಟು ಸಹಿ ಹಾಕಿರುತ್ತೀರಿ ಎಂದರೆ ಸಾಕ್ಷಿಯು ಒಂದೇ ಸಹಿ ಎಂದು ನುಡಿಯುತ್ತಾರೆ. ಯಾವ ಪೊಲೀಸರು ಪಂಚನಾಮೆಯನ್ನು ಬರೆದಿರುತ್ತಾರೆ ಎಂದು ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನೀವೇನಾದರೂ ಯಾವ ಯಾವ ಪೊಟೋಗಳನ್ನು ತೆಗೆದಿರುತ್ತಾರೆ ಎಂದು ನೋಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆರೋಪಿತರನ್ನು ಯಾವುದರಲ್ಲಿ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು 2 ಪೊಲೀಸ್ ಜೀಪಿನಲ್ಲಿ ಕರೆದುಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ವಾಹನ ಸಂಖ್ಯೆ ಹೇಳಲು ಬರುತ್ತಾ ಎಂದರೆ ಸಾಕ್ಷಿಯು ಅದನ್ನೆಲ್ಲ ಹೇಳಲು ಬರುವುದಿಲ್ಲ, ಆದರೆ ಪೊಲೀಸ್ ಜೀಪಿನಲ್ಲಿ ಬಂದಿದ್ದರು ಎಂದು ನುಡಿಯುತ್ತಾರೆ. ಎಂದು ನುಡಿಯುತ್ತಾರೆ. ಪೊಲೀಸರು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಇದ್ದರು ಎಂದರೆ ಸಾಕ್ಷಿಯು ಮಧ್ಯಾಹ್ನ 2 ರಿಂದ 6 ಗಂಟೆಯವರೆಗೆ ಇದ್ದರು ಎಂದು ನುಡಿಯುತ್ತಾರೆ.ನಿಪಿ-10 ಮತ್ತು 11 ಪೊಟೊದಲ್ಲಿ ಮಾಸ್ಕ ಹಾಕಿದ್ದರಿಂದ ನಿರ್ಧಿಷ್ಟವಾಗಿ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ಕಣ್ಣನ್ನು ನೋಡಿ ಹೇಳಬಹುದು ಎಂದು ನುಡಿಯುತ್ತಾರೆ. ನಿಮಗೆ ಆರೋಪಿತರ ವೈಯಕ್ತಿಕ ಪರಿಚಯವಿರುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮಗೆ ಎಲ್ಲ ಆರೋಪಿತರ ಹೆಸರು ವೈಯಕ್ತಿಕವಾಗಿ ಗೊತ್ತಿರುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪೊಲೀಸರು ಕರೆದುಕೊಂಡು ಬಂದ ಆರೋಪಿತರ ಹೆಸರು, ವೈಯಕ್ತಿಕ ಮಾಹಿತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪೊಲೀಸರು ತೋರಿಸಿದ ಕಾರಣ ನೀವು ಆರೋಪಿತರು ಎಂದು ಹೇಳುತ್ತಿದ್ದೀರಿ ಎಂದರೆ ಸರಿ. ಕಳ್ಳತನವಾದ ವಸ್ತುಗಳ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಚಾಸಾ-1 ರವರು ಹೇಳಿದ್ದರ ಮೇರೆಗೆ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಹಾಕಿರುತ್ತೀರಿ ಎಂದರೆ ಹೌದು

ಪಂಚರಾಗಿ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಮನೆಯ ಚೆಕ್ಕಂದಿ ಹೇಳಲು ಬರುತ್ತಾ ಎಂದರೆ ಮನೆಗಳು ಇರುತ್ತವೆ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ ಯಾರ ಮನೆ ಇರುತ್ತದೆ ಎಂದರೆ ಸಾಕ್ಷಿಯು ತಿಮ್ಮಪ್ಪ ನಾಯಕ ಇವರ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ನೀವು ಹೇಳಿದ ಹಾಗೆ ಪೊಲೀಸರು ಚಾಸಾ–1 ರವರ ಮನೆಗೆ ಬಂದಿದ್ದಾಗಲಿ, ಯಾವುದೇ ಪಂಚನಾಮೆ ಮಾಡಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು ಕರೆದುಕೊಂಡು ಬಂದಿರುವುದಿಲ್ಲ, ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಉಳಿದ ಆರೋಪಿತರ ಪರ ವಕೀಲರು 1ನೇ ಆರೋಪಿ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿಕೊಂಡಿದ್ದು, ಅದರಂತೆ ಅಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.